ದಿನಾಂಕ [illegible]-09-2017 ರ ಗುರುವಾರ ಬೆಳಿಗ್ಗೆ 11-00 ಗಂಟೆಗೆ ಶ್ರೀ ಇ.ಎಸ್. ರವಿಶಂಕರ್, ಪ್ರಭಾರ ಅಧೀಕ್ಷಕ ಇಂಜಿನಿಯರ್(ವಿ), ಸೆಸ್ಕ್, ಕಾರ್ಯ ಮತ್ತು ಪಾಲನಾ ವೃತ್ತ, ಮಂಡ್ಯ ರವರ ಅಧ್ಯಕ್ಷತೆಯಲ್ಲಿ ಪಾಂಡವಪುರ ಉಪವಿಭಾಗ ಕಛೇರಿಯ ಆವರಣದಲ್ಲಿ ನಡೆದ ಜನ ಸಂಪರ್ಕ ಸಭೆಯ ನಡಾವಳಿಗಳು.

<u>ಹಾಜರಿದ್ದ ಅಧಿಕಾರಿಗಳು / ನೌಕರರು</u>
<u>ಶ್ರೀಯುತ:</u>

| | | |
|---|---|---|
| 1. | ಇ. ರವಿಶಂಕರ್ | : ಕಾನಿಇಂ(ವಿ), ಮಂಡ್ಯ ವೃತ್ತ. |
| 2. | ಎನ್. ಶ್ರೀನಿವಾಸಮೂರ್ತಿ | : ಕಾನಿಇಂ(ವಿ), ಪಾಂಡವಪುರ ವಿಭಾಗ. |
| 3. | ಎಂ. ಪ್ರಕಾಶ್ | : ಲೆಕ್ಕಾಧಿಕಾರಿ, ಪಾಂಡವಪುರ ವಿಭಾಗ. |
| 4. | ಮಹದೇವಪ್ಪ | : ಲೆಕ್ಕಾಧಿಕಾರಿ, ಆಂ.ಪ., ಪಾಂಡವಪುರ ವಿಭಾಗ. |
| 5. | ವಿ. ಪುಟ್ಟಸ್ವಾಮಿ | : ಸಕಾನಿಇಂ(ವಿ), ಪಾಂಡವಪುರ ಉಪವಿಭಾಗ. |
| 6. | ಜೆ. ಚೇತನ್ | : ಪ್ರ: ಸಇಂ(ತಾಂ), ಪಾಂಡವಪುರ ಉಪವಿಭಾಗ. |
| 7. | ಹೆಚ್.ಇ. ಮಹದೇವ | : ಸಇಂ(ವಿ), ಪಟ್ಟಣ ಶಾಖೆ, ಪಾಂಡವಪುರ ಉಪವಿಭಾಗ. |
| 8. | ಬಿ. ನಂದೀಶ್ | : ಪ್ರಭಾರ ಸಇಂ(ವಿ), ಟಿ.ಎಸ್. ಛತ್ರ ಶಾಖೆ. |
| 9. | ಎಲ್. ಕೃಷ್ಣರಂಗರಾಜು | : ಪ್ರಭಾರ ಸಇಂ(ವಿ), ಮೇಲುಕೋಟೆ ಶಾಖೆ. |
| 10. | ಜಿ. ಸುಷ್ಮ | : ಕಿಇಂ(ವಿ), ಚಿನಕುರಳಿ ಶಾಖೆ. |
| 11. | ಎಲ್. ಕೃಷ್ಣರಂಗರಾಜು | : ಕಿಇಂ(ವಿ), ಮಾಣಿಕ್ಯನಹಳ್ಳಿ ಶಾಖೆ. |
| 12. | ಬಿ. ಮೂರ್ತಿ | : ಪ್ರಭಾರ ಕಿಇಂ(ವಿ), ಕ್ಯಾತನಹಳ್ಳಿ ಶಾಖೆ. |
| 13. | ವಿ. ಕೃಷ್ಣಮೂರ್ತಿ | : ಪ್ರಭಾರ ಕಿಇಂ(ವಿ), ಬನ್ನಂಗಾಡಿ ಶಾಖೆ. |
| 14. | ವಿ. ಕುಮಾರಸ್ವಾಮಿ | : ಪ್ರಭಾರ ಕಿಅಸ., ಪಾಂಡವಪುರ ವಿಭಾಗ. |

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಸೆಸ್ಕ್, ಕಾರ್ಯ ಮತ್ತು ಪಾಲನಾ ಉಪವಿಭಾಗ, ಪಾಂಡವಪುರ ರವರು ಸಭೆಗೆ ಹಾಜರಿದ್ದ ಎಲ್ಲಾ ಅಧಿಕಾರಿ / ನೌಕರರನ್ನು ಹಾಗೂ ವಿದ್ಯುತ್ ಗ್ರಾಹಕರನ್ನು ಸ್ವಾಗತಿಸಿದರು.

ಸದರಿ ಸಭೆಯಲ್ಲಿ ಹಾಜರಿದ್ದ ವಿದ್ಯುತ್ ಗ್ರಾಹಕರ ಮೌಖಿಕವಾಗಿ ತಿಳಿಸಿದ / ಲಿಖಿತ ಮನವಿಗಳಲ್ಲಿ ಉಲ್ಲೇಖಿಸಿರುವ ವಿದ್ಯುತ್ ಸಂಬಂಧ ಸಮಸ್ಯೆಗಳ ಬಗ್ಗೆ ಚರ್ಚಿಸಿ ಸಭೆಯಲ್ಲಿ ತೆಗೆದುಕೊಂಡ / ತೆಗೆದುಕೊಳ್ಳಬೇಕಾದ ತೀರ್ಮಾನಗಳು ಈ ಕೆಳಕಂಡಂತೆ ಇರುತ್ತವೆ.

1. <u>ಶ್ರೀ ಎಂ.ಎಸ್. ಜವರೇಗೌಡ ಬಿನ್ ಸಣ್ಣಮಾಯಿಗೌಡ, ಮಾದ್ರಹಳ್ಳಿ ಗ್ರಾಮ, ಮೊಬೈಲ್ ನಂ. 99721 85800.</u>

<u>ದೂರು:</u> ಮನೆಯ ಮೇಲ್ಭಾಗದಲ್ಲಿ ಲೈನು ಹಾದು ಹೋಗಿದ್ದು, ವಿದ್ಯುತ್ ತಂತಿಗಳು ಆಗಾಗ್ಗೆ ತುಂಡಾಗಿ ಬೀಳುತ್ತಿವೆ. ಆದ್ದರಿಂದ, ಮನೆಯ ಪಕ್ಕದಲ್ಲಿರುವ ಪರಿವರ್ತಕವನ್ನು ಬೇರೆ ಕಡೆಗೆ ಸ್ಥಳಾಂತರ ಮಾಡಿಕೊಡಬೇಕೆಂದು ಮನವಿ ಮಾಡಿರುತ್ತಾರೆ.

<u>ಕ್ರಮ:</u> ಕೂಡಲೇ ಸ್ಥಳ ಪರಿಶೀಲಿಸಿ ಪರಿವರ್ತಕವನ್ನು ಬೇರೆ ಕಡೆಗೆ ಸ್ಥಳಾಂತರದ ಅವಶ್ಯಕತೆ ಇದ್ದಲ್ಲಿ ಅಂದಾಜು ಪಟ್ಟಿಯನ್ನು ತಯಾರಿಸಿ ವಿಭಾಗೀಯ ಕಛೇರಿಗೆ ಸಲ್ಲಿಸಲು ಉಪವಿಭಾಗಾಧಿಕಾರಿಗಳಿಗೆ ನಿರ್ದೇಶನ ನೀಡಲಾಯಿತು.

2. <u>ಶ್ರೀ ಸುರೇಶ್ ಬಿನ್ ದೇವಪ್ಪ, ಹೊಸ ಬಡಾವಣೆ, ಸುಂಕಾ ತೊಣ್ಣೂರು ಗ್ರಾಮ, ಮೊಬೈಲ್ ನಂ. 96868 57800.</u>

<u>ದೂರು:</u> ಹೊಸದಾಗಿ ನಿರ್ಮಿಸಿರುವ ಫ್ಲೋರ್ ಮಿಲ್‌ಗೆ ಸರ್ವೀಸ್ ನೀಡುವಂತೆ ಮನವಿ ಮಾಡಿರುತ್ತಾರೆ.

<u>ಕ್ರಮ:</u> ಕಾಮಗಾರಿ ಕೆಲಸ ಪೂರ್ಣಗೊಂಡಿರುವುದಾಗಿ ಶಾಖಾಧಿಕಾರಿಗಳು ತಿಳಿಸಿರುತ್ತಾರೆ. ಒಂದು ವಾರದೊಳಗೆ ವಿದ್ಯುತ್ ಸಂಪರ್ಕ ಕಲ್ಪಿಸಿಕೊಡುವಂತೆ ಸಂಬಂಧಪಟ್ಟ ಶಾಖಾಧಿಕಾರಿ / ಉಪವಿಭಾಗಾಧಿಕಾರಿಗಳಿಗೆ ಸೂಚಿಸಲಾಯಿತು.

3. <u>ಶ್ರೀ ಕೃಷ್ಣೇಗೌಡ ಬಿನ್ ಈರೇಗೌಡ, ಪಾಂಡವಪುರ ಟೌನ್, ಮೊಬೈಲ್ ನಂ. 94484 14652.</u>

<u>ದೂರು:</u> ಗೃಹ ವಿದ್ಯುತ್ ಬಳಕೆದಾರರಿಗೆ ₹ 40/- ಗಳ ದಂಡ ಶುಲ್ಕವನ್ನು ಬಿಲ್ಲಿನಲ್ಲಿ ವಿಧಿಸಲಾಗುತ್ತಿದೆ. ಗ್ರಾಹಕರಿಗೆ ತಿಳುವಳಿಕೆ ನೀಡಿ ಹೆಚ್ಚುವರಿ ಭಾರವನ್ನು ಕರಾರು ಪತ್ರ (Agreement) ತೆಗೆದುಕೊಳ್ಳದೇ, ಅನುಮೋದಿಸಿಕೊಡಬೇಕೆಂದು ಮನವಿ ಮಾಡಿರುತ್ತಾರೆ.

<u>ಕ್ರಮ:</u> ಹೆಚ್ಚುವರಿ ಭಾರವನ್ನು ಕರಾರು ಪತ್ರ (Agreement) ನೀಡಿಯೇ ಅನುಮೋದಿಸಿಕೊಳ್ಳಬೇಕು. ಎಲೆಕ್ಟ್ರೋಸ್ಟಾಟಿಕ್ ಮಾಪಕಗಳನ್ನು ಈ ಉದ್ದೇಶಕ್ಕಾಗಿಯೇ ಅಳವಡಿಸಲಾಗಿದ್ದು, BMD ಪ್ರಕಾರ ದಂಡ ಭರಿಸಬೇಕಾಗುತ್ತದೆ ಎಂದು ತಿಳಿಸಲಾಯಿತು.

4. <u>ಶ್ರೀ ಪ್ರಕಾಶ್ ಬಿನ್ ಪುಟ್ಟೇಗೌಡ, ಚಿಕ್ಕಾಡೆ ಗ್ರಾಮ, ಮೊಬೈಲ್ ನಂ. 95356 65087.</u>

<u>ದೂರು:</u> ಆಲೆಮನೆಗೆ ಸರಿಯಾಗಿ ವಿದ್ಯುತ್ ಸರಬರಾಜು ಆಗುತ್ತಿಲ್ಲ. ಇದರಿಂದ ಕಬ್ಬು ಅರೆಯಲು ಅಡಚಣೆ ಉಂಟಾಗುತ್ತಿದ್ದು, ಈ ಸಮಸ್ಯೆಯನ್ನು ಸರಿಪಡಿಸಿಕೊಡುವಂತೆ ಮನವಿ ಮಾಡಿರುತ್ತಾರೆ.

<u>ಕ್ರಮ:</u> ಡಿ.ಪಿ. ಹಳ್ಳಿ 66/11 ಕೆವಿ ವಿದ್ಯುತ್ ವಿತರಣಾ ಕೇಂದ್ರದ ಎಲ್ಲಾ ಫೀಡರ್‌ಗಳು ನಗರ ಫೀಡರ್‌ಗಳಾಗಿದ್ದು, ಸದರಿ ಫೀಡರ್‌ಗಳಲ್ಲಿ ಐ.ಪಿ. ಸೆಟ್ ಸ್ಥಾವರಗಳು ಸೇರಿರುತ್ತದೆ. NJY ಫೀಡರ್ ಕಾಮಗಾರಿಗಳು ಪ್ರಗತಿಯ ಹಂತದಲ್ಲಿದ್ದು, ಐ.ಪಿ. ಸೆಟ್ ಸ್ಥಾವರಗಳನ್ನು ಬೇರ್ಪಡಿಸಿ ಪ್ರತ್ಯೇಕ ಐ.ಪಿ. ಫೀಡರ್‌ಗಳು ಚಾಲನೆಗೊಂಡ ನಂತರ ಈ ಸಮಸ್ಯೆ ಬಗೆಹರಿಯುವುದಾಗಿ ಗ್ರಾಹಕರಿಗೆ ಮನವರಿಕೆ ಮಾಡಿಕೊಡಲಾಯಿತು.

ಮೇಲ್ಕಂಡ ದೂರುಗಳಿಗೆ ತೆಗೆದುಕೊಂಡ ಕ್ರಮಗಳ ಬಗ್ಗೆ ಅನುಪಾಲನಾ ವರದಿಯನ್ನು ಮುಂದಿನ ಜನ ಸಂಪರ್ಕ ಸಭೆಯಲ್ಲಿ ಹಾಜರುಪಡಿಸುವಂತೆ ಉಪವಿಭಾಗಾಧಿಕಾರಿಗಳಿಗೆ ಸೂಚಿಸಲಾಯಿತು.

<u>:: ಸಭೆಯನ್ನು ಮಧ್ಯಾಹ್ನ 01-00 ಗಂಟೆಗೆ ಮುಕ್ತಾಯಗೊಳಿಸಲಾಯಿತು ::</u>

ಮೆಮೊ ಸಂಖ್ಯೆ: ಸಕಾನಿಇಂ(ವಿ)/ಸಇಂ(ತಾಂ)/ಪಾ.ಪುರ/17-18/1449-62 ದಿನಾಂಕ: 07-09-2017

<u>ಪ್ರತಿಯನ್ನು ಇವರ ಅವಗಾಹನೆಗೆ ಸಲ್ಲಿಸಲಾಗಿದೆ:</u>

1. ಮುಖ್ಯ ಇಂಜಿನಿಯರ್(ವಿ), ಸೆಸ್ಕ್, ಕಾರ್ಯ ಮತ್ತು ಪಾಲನಾ ವಲಯ, ಮೈಸೂರು.
2. ಪ್ರಧಾನ ವ್ಯವಸ್ಥಾಪಕರು(ತಾಂತ್ರಿಕ), ಸೆಸ್ಕ್, ನಿಗಮ ಕಾರ್ಯಾಲಯ, ಮೈಸೂರು.
3. ಅಧೀಕ್ಷಕ ಇಂಜಿನಿಯರ್(ವಿ), ಸೆಸ್ಕ್, ಕಾರ್ಯ ಮತ್ತು ಪಾಲನಾ ವೃತ್ತ, ಮಂಡ್ಯ.
4. ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಸೆಸ್ಕ್, ಕಾರ್ಯ ಮತ್ತು ಪಾಲನಾ ವಿಭಾಗ, ಪಾಂಡವಪುರ.

ಪ್ರತಿಯನ್ನು ಇವರ ಮಾಹಿತಿಗಾಗಿ ಕಳುಹಿಸಲಾಗಿದೆ:

1. ಲೆಕ್ಕಾಧಿಕಾರಿ, ಸೆಸ್ಕ್, ಪಾಂಡವಪುರ.
2. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಸೆಸ್ಕ್, ವಿಭಾಗೀಯ ಕಛೇರಿ, ಪಾಂಡವಪುರ.
3. ಲೆಕ್ಕಾಧಿಕಾರಿ, ಆಂ.ಪ., ಸೆಸ್ಕ್, ಪಾಂಡವಪುರ.

<u>ಪ್ರತಿಯನ್ನು ಇವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ:</u>

1. ಶಾಖಾಧಿಕಾರಿ, ಸೆಸ್ಕ್, ಕಾರ್ಯ ಮತ್ತು ಪಾಲನಾ ಶಾಖೆ, ಪಟ್ಟಣ (ಪಾಂಡವಪುರ) / ಟಿ.ಎಸ್. ಛತ್ರ / ಚಿನಕುರಳಿ / ಕ್ಯಾತನಹಳ್ಳಿ / ಬನ್ನಂಗಾಡಿ / ಮೇಲುಕೋಟೆ / ಮಾಣಿಕ್ಯನಹಳ್ಳಿ.

ಸಗಂ(ತಾಂ) / ಮುಕ.

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ),
ಸೆಸ್ಕ್, ಪಾಂಡವಪುರ ಉಪವಿಭಾಗ.